ಆರ್.ಡಬ್ಲೂಃ 2

ದಿನಾಂಕಃ 23-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ 3 ನೇ ಎದುರುದಾರ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಎಂದು ದೃಢೀಕರಿಸುತ್ತೇನೆ.

ಆದ್ದರಿಂದ ಅರ್ಜಿಯನ್ನು ವಜಾಗೊಳಿಸುವಂತೆ ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ ಅರ್ಜಿದಾರ ಪರ ಮಾನ್ಯ ವಕೀಲರಿಂದಃ

ನಾನು ನಾಗರಮುನವಳ್ಳಿಯಲ್ಲಿ ವಾಸವಾಗಿದ್ದೇನೆ. ನಿಮ್ಮ ಹೆಸರಿನಲ್ಲಿ ಹೊಲ ಮನೆ ಇದೆಯಾ ಎಂದರೆ ಸಾಕ್ಷಿಯು ನನ್ನ ಗಂಡನ ಹೆಸರಿನಲ್ಲಿ ಇದೆ, ನನ್ನ ಹೆಸರಿನಲ್ಲಿ ಇಲ್ಲ ಎನ್ನುತ್ತಾರೆ. ನಾನು ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನಿಮ್ಮ ಹೆಸರಿನಲ್ಲಿ 3 ಎಕರೆ ಹೊಲ ಇದೆ ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿ ಆಗಿಲ್ಲ ಎನ್ನುತ್ತಾರೆ. 2019-20 ರಲ್ಲಿ ನನ್ನ ಹೆಸರಿನಲ್ಲಿ ಕೆ.ಕೆ.ಹಂಚಿನಾಳ ಗ್ರಾಮದ ಸರ್ವೆ ನಂ.22/3 ರಲ್ಲಿ 3 ಎಕರೆ ಜಮೀನು ಆರ್.ಟಿ.ಸಿ ಯಲ್ಲಿ ಇಂಟ್ರಿ ಆಗಿದೆ ಎಂದರೆ ಸರಿಯಲ್ಲ. ಸರ್ವೆ ನಂ.22/3 ನ್ನು ನನ್ನ ತವರು ಮನೆಯವರು ಸಾಗುವಳಿ ಮಾಡುತ್ತಾರೆ. ನನಗೆ ಇಬ್ಬರು ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು. ಮೃತ ಪ್ರಕಾಶ ಈತನು ನನ್ನ 2 ನೇ ಮಗ. ನನ್ನ ಮಗ ಪ್ರಕಾಶನಿಗೂ ನನಗೂ ಜಗಳ ಆಗಿರುವುದಿಲ್ಲ. ನನ್ನ ಮಗ ಪ್ರಕಾಶ ನನ್ನ ಜೊತೆ ಜಗಳ ಮಾಡಿ ಪಾಲಿನ ಸಂಬಂಧ ಸಿವಿಲ್ ದಾವೆ ಹಾಕಿದ ನಂತರ ಜಮೀನು ಪಾಲು ಆಗಿ ಡಿಕ್ರಿ ಆಯಿತು ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಆಸ್ತಿಯಲ್ಲಿ ನ್ಯಾಯಾಲಯದ ಡಿಕ್ರಿ ಪ್ರಕಾರ ಸಮಾನವಾಗಿ ಆಸ್ತಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವೆ

ಸಂ.305/2007 ಚಿಕ್ಕೋಡಿ ನ್ಯಾಯಾಲಯದಲ್ಲಿ ತೀರ್ಪು ಆಗಿದೆಯೋ ಇಲ್ಲವೋ ಎಂದರೆ ಸಾಕ್ಷಿಯು ನಾನು ವಿದ್ಯಾಭ್ಯಾಸ ಮಾಡದೇ ಇದ್ದುದ್ದರಿಂದ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ಅದಾ ಸಂ.315/2007 ರ ದಾವೆಯಲ್ಲಿ ನಾನೇ ಪ್ರತಿವಾದ ಪತ್ರ ಸಲ್ಲಿಸಿದ ಮೇರೆಗೆ ನನ್ನ ಗಂಡನ ಆಸ್ತಿಯಲ್ಲಿ 5 ನೇ 1 ಪಾಲು ನನಗೆ ಡಿಕ್ರಿಯಾಗಿ ಬಂತು ಎಂದರೆ ಸರಿಯಲ್ಲ. ನನ್ನ ಗಂಡ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ನಿಮ್ಮ ಗಂಡ ಸಕ್ಕರೆ ಕಾರ್ಖಾನೆಯಲ್ಲಿ ನಿವೃತ್ತಿ ಹೊಂದಿದ ನಂತರ ನಿಮಗೆ ಕಾರ್ಖಾನೆಯಿಂದ ಪಿಂಚಣಿ ಬರುತ್ತಿದೆಯಾ ಎಂದರೆ ಸಾಕ್ಷಿಯು ತಿಂಗಳಿಗೆ 400/- ರೂ. ಪಿಂಚಣಿ ಬರುತ್ತದೆ ಎಂದು ನುಡಿಯುತ್ತಾರೆ. ನನಗೆ ಹೊಲ ಮನೆಯಲ್ಲಿ ಉತ್ಪನ್ನ ಬರುವುದರಿಂದ ಈ ಕೇಸಿನಲ್ಲಿ ಪರಿಹಾರದ ಹಣ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ನನ್ನ ಮಗ ಪ್ರಕಾಶ ಮೃತಪಟ್ಟಾಗ ಈತನು ಆರ್ಮಿಯಿಂದ ಯಾವಾಗ ನಿವೃತ್ತಿ ಹೊಂದಿದ ಎಂದು ನನಗೆ ಹೇಳಲು ಆಗುವುದಿಲ್ಲ. 2007 ನೇ ಇಸವಿಯಿಂದ ನೀವು ಬೇರೆ ವಾಸವಾಗಿದ್ದೀರಾ ಎಂದರೆ ಸಾಕ್ಷಿಯು ನನ್ನ ಮಗ ಪ್ರಕಾಶ ಮೃತಪಟ್ಟ ನಂತರ ಬೇರೆ ವಾಸವಾಗಿದ್ದೇನೆ ಎಂದು ಹೇಳುತ್ತಾರೆ. ಅದಾ ಸಂ.315/2007 ರ ದಾವೆಯನ್ನು ನನ್ನ ಮಗ ನನ್ನ ಜೊತೆ ಜಗಳ ಆದ ನಂತರ ಹಾಕಿದ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **2** ನೇ ಎದುರುದಾರ ಪರ ಮಾನ್ಯ ವಕೀಲರಿಂದಃ</u>

ನಿಮ್ಮ ಸೊಸೆ ಕೇಸನ್ನು ಯಾವುದರ ಸಂಬಂಧ ಹಾಕಿದ್ದೀರಾ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ನನ್ನ ಮಗನಿಗೆ ರಸ್ತೆ ಅಪಘಾತ ಆಗಿದ್ದರಿಂದ ಮೃತಪಟ್ಟ ಕಾರಣ ಪರಿಹಾರ ಕೋರಿ ಹಾಕಿರುತ್ತಾರೆ ಎನ್ನುತ್ತಾರೆ. ಅನಿಲ ಅರ್ಜುನ ಈಟಿ ಅಂದರೆ ಪೊಲೀಸರಿಗೆ ಕೊಟ್ಟ ಪಿರ್ಯಾದಿದಾರರು ನನ್ನ ಗಂಡನ ತಮ್ಮನ ಮಗ. ನಿಮ್ಮ ಸೊಸೆ ಶ್ರೀದೇವಿ ಆಕೆಯ ಗಂಡ ಪ್ರಕಾಶ ಮೃತಪಟ್ಟಾಗ ಪೊಲೀಸರಿಗೆ ದೂರು ಕೊಟ್ಟ ನಂತರ

ಅನಿಲ ಅರ್ಜುನ ಈಟಿ ಏನೆಂದು ದೂರು ಕೊಟ್ಟರು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅನಿಲ ಅರ್ಜುನ ಈಟಿ ಈತನು ಪೊಲೀಸರಿಗೆ ಕೊಟ್ಟ ದೂರಿನಲ್ಲಿ ನನ್ನ ಸೊಸೆ, ಆರೋಪಿತರಾದ ಮಹೇಶ ಹರಿಜನ, ಸಂತೋಷ ಕಮತೆ, ಭರಮು ಹರಿಜನ ಇವರೆಲ್ಲರೂ ಸೇರಿ ಟೆಂಪೋ ಟ್ರ್ಯಾಕ್ಸ ಉಪಯೋಗಿಸಿ ನನ್ನ ಮಗನನ್ನು ಕೊಲೆ ಮಾಡಿದ್ದಾರೆ ಎಂದು ದೂರು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಮಗ ಪ್ರಕಾಶನನ್ನು ಅರ್ಜಿದಾರಳಾದ ಶ್ರೀದೇವಿ ಮತ್ತು ಇತರ ಆರೋಪಿತರು ಕೊಲೆ ಮಾಡಿದರು ಎಂದು ಚಿಕ್ಕೋಡಿ ನ್ಯಾಯಾಲಯದಲ್ಲಿ ಕೇಸ ನಡೆದಿದೆ ಎಂದರೆ ನನಗೆ ಗೊತ್ತಿಲ್ಲ. ಕೊಲೆ ಕೇಸಿಗೆ ಸಂಬಂಧಿಸಿದಂತೆ ಪೊಲೀಸರು ನನ್ನ ಹೇಳಿಕೆ ಪಡೆದುಕೂಂಡಿದ್ದಾರೆ ಎಂದರೆ ಸರಿಯಲ್ಲ. ಟೆಂಪೋ ಟ್ರ್ಯಾಕ್ಸ ನಂ ಕೆಎ-48-ಎಂ-0371 ಈ ವಾಹನವನ್ನು ಆರೋಪಿತರು ಸೇರಿ ನನ್ನ ಮಗ ಪ್ರಕಾಶನನ್ನು ಕೊಲೆ ಮಾಡಲು ಉಪಯೋಗಿಸಿದ್ದಾರೆ ಎಂದು ನನಗೆ ಗೊತ್ತಿದ್ದರು ಆ ಕಾರಣ ಕೊಲೆ ಮಾಡಲು ಉಪಯೋಗಿದ್ದಾರೆ ಎಂದು ಹೇಳಿದರೆ ಪರಿಹಾರ ಹಣ ಸಿಗುವುದಿಲ್ಲ ಎಂಬ ಕಾರಣಕ್ಕೆ ನನ್ನ ಮಗ ಪ್ರಕಾಶ ಈತನು ಈ ವಾಹನದಿಂದ ರಸ್ತೆ ಅಪಘಾತದಲ್ಲಿ ಮೃತಪಟ್ಟನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.